Strength of Teachers and Students in Moka High School in Bellary Taluk

837. Sri D. NARAYANA DAS (Harapanahally).—

Will the Minister for Eduction be pleased to State:—

(*a*) the strength of teachers and students in Moka High School in Bellary Taluk;

(*b*) whether the teaching staff reside in Moka;

(*c*) the amount of fees they are cellecting from Scheduled Caste and Scheduled Tribe students;

(*d*) is it a Government School or Private School?

Sri A. R. BADARINARAYANA (Minister for Education).—

(*a*) Teachers ... 6.

Students ... 53.

(*b*) One teacher resides in Moka and others reside outside Moka.

(*c*) Only a fee of 50 paise towards Cumulative records is collcted from Scheduled Caste/Scheduled Tribe students.

(*d*) Government School.

ಶ್ರೀ ಡಿ. ನಾರಾಯಣ ದಾಸ್.—ಇಷ್ಟು ಕಡಿಮೆ ಸಂಖ್ಯೆಯಲ್ಲಿ ಹುಡುಗರು ಇರಲು ಕಾರಣ ವೇನು ?

† ಶ್ರೀ ಎ. ಆರ್. ಬದರೀನಾರಾಯಣ್.—ಇದನ್ನು ಅವರೇ ಹೇಳಬೇಕು.

ಶ್ರೀ ಡಿ. ನಾರಾಯಣದಾಸ್.— ಇಲ್ಲಿರುವ ಮೇಷ್ಟ್ರುಗಳೆಲ್ಲ 13 ಮೈಲಿ ದೂರ ಇರುವ ಬಳ್ಳಾರಿಯಿಂದ ಇಲ್ಲಿಗೆ ನುಮಾರು 12 ಗಂಟೆಗೆ ಇಲ್ಲವೇ ಒಂದು ಗಂಟೆ ವೇಳೆಗೆ ಬರುತ್ತಾರೆ ಮತ್ತು ವಿದ್ಯಾರ್ಥಿಗಳಿಗೆ ಸರಿಯಾದ ಪಾಠ ಕೂಡ ಮಾಡುತ್ತಿಲ್ಲ. ಇದರ ಬಗ್ಗೆ ಸರಕಾರಕ್ಕೆ ಯಾವುದೂ ಗೊತ್ತಿಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಹೊರಗಿಂದ ಬರುವ ಟೀಚರುಗಳಿಂದ ತೊಂದರೆ ಗಳಾಗುತ್ತಿದ್ದರೆ ಅವರಿಗೆ ಅಲ್ಲೇ ಇರುವ ವ್ಯವಸ್ಥೆ ಮಾಡಬಹುದು.

ಶ್ರೀ ಬಿ. ಇ. ರಾಮಯ್ಯ.—ಇದರಲ್ಲಿ ಹುಡುಗರ ಸಂಖ್ಯೆ 53 ಇದೆ ಎಂದು ಹೇಳಿದೆ. ಮುಂದೆ ಇದು 30ಕ್ಕೆ ಬೇಕಾದರೂ ಇಳಿಯಬಹುದು, ಇದನ್ನು ಸರಿಮಾಡಬೇಕು ಎಂದು ಇದುವರೆಗೆ ಸರಕಾರದ ಗಮನಕ್ಕೆ ಬರಲಿಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ್.—ಇದು ನಮ್ಮ ಗಮನಕ್ಕೆ ಬಂದಿಲ್ಲ. ಇದರ ಬಗ್ಗೆ ಅಲ್ಲಿನ ಜನರು ಪ್ರಚಾರ ಸ್ವಲ್ಪ ಜಾಸ್ತಿಯಾಗಿ ಮಾಡಬೇಕು ಎಂದು ತೋರುತ್ತೆ.

ಶ್ರೀ ಬಿ. ಇ. ರಾಮಯ್ಯ.—ಇಲ್ಲಿಗೆ ಇಲಾಖೆಯ ಅಧಿಕಾರಿಗಳಾದರೂ ವಿಸಿಟ್ ಕೊಟ್ಟಿದ್ದಾರೆಯೇ ಹೇಗೆ ?

ಶ್ರೀ ಎ. ಆರ್. ಬದರೀನಾರಾಯಣ್.—ನಾನು ಅಲ್ಲಿಗೆ ಹೋಗಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—(ಸಿ)ಗೆ ಉತ್ತರವಾಗಿ ಅನುಸೂಚಿತ ಜಾತಿಯ ಹುಡುಗರಿಂದ 50 ಪೈಸೆ ಮಾತ್ರ ವಸೂಲು ಮಾಡಲಾಗಿದೆ ಎಂದು ಹೇಳಿದ್ದೀರಿ. ಇಲ್ಲಿರುವ 53 ಜನ ಹುಡುಗರಲ್ಲಿ ಹರಿಜನರೂ ಹಾಗೂ ಗಿರಿಜನರು ಎಷ್ಟು ಜನರಿದ್ದಾರೆ ?

ಶ್ರೀ ಎ. ಆರ್. ಹದರೀನಾರಾಯಣ್.—ಇದರ ವಿವರಗಳು ನನ್ನಲ್ಲಿಲ್ಲ.

ಶ್ರೀ ಡಿ. ನಾರಾಯಣದಾಸ್.—ಇಲ್ಲಿರುವ ಶಾಲೆ ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ ಎನ್ನುವುದನ್ನು ತನಿಖೆ ಮಾಡಲು ಸರಕಾರದ ಅಧಿಕಾರಿಗಳನ್ನು ನೇಮಿಸಲಾಗಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್.—ಅಸಮರ್ಪಕವಾಗಿ ನಡೆಯುತ್ತಿದೆ ಎಂದು ತಮ್ಮ ಅಭಿಪ್ರಾಯವಾದರೆ ಖಂಡಿತ ಇದನ್ನು ವಿಚಾರಣೆ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ತಮ್ಮ ಉತ್ತರದಿಂದಲೇ ಇಲ್ಲಿ ಅಸಮರ್ಪಕವಾದ ಕೆಲಸಗಳು ನಡೆಯುತ್ತಿವೆ ಎಂದು ತಮಗೆ ತಿಳಿಯುವುದಿಲ್ಲವೇ ? ವಿದ್ಯಾರ್ಥಿಗಳು ಕಡಿಮೆ ಇದ್ದರೂ ಟೀಚರುಗಳು ಜಾಸ್ತಿ ಇದ್ದಾರೆ. ಇದನ್ನು ಸರ್ಕಾರವೇ ಏಕೆ ಪರಿಶೀಲಿಸಬಾರದು?

ಶ್ರೀ ಎ. ಆರ್. ಬದರೀನಾರಾಯಣ್.—ತಾಲ್ಲೂಕು ಬೊರ್ಡುಗಳಿಂದ ಬಂದ ಸಂಸ್ಥೆ ಇದು, ಈಗ ಇದನ್ನು ನೋಡಿ ಸರಿಪಡಿಸಬೇಕಾಗಿದೆ.

ಶ್ರೀ ಎಂ. ವಿ. ರುದ್ರಪ್ಪ.—53 ಜನ ಹುಡುಗರಿಗೆ ಆರು ಜನ ಉಪಾಧ್ಯಾಯರುಗಳು ಇದ್ದಾರೆ ಎಂದು ಇದರಲ್ಲಿ ಹೇಳಲಾಗಿದೆ. ಕಡಿಮೆ ಹುಡುಗರಿಗೆ ಹೆಚ್ಚು ಟೀಚರುಗಳು ಅನಾವಶ್ಯಕವಾಗಿದ್ದರೆ ಅವರನ್ನು ಬೇರೆ ಕಡೆಗೆ ಎಂದರೆ ಟೀಚರುಗಳ ಅಗತ್ಯ ಇರುವ ಕಡೆಗೆ ಏಕೆ ವರ್ಗ ಮಾಡಬಾರದು ?

ಶ್ರೀ ಎ. ಆರ್. ಬದರೀನಾರಾಯಣ್.—ಇದರಲ್ಲಿ ಸರ್‌ಪ್ಲಸ್ ಎಂದು ಇದ್ದರೆ ಹಾಗೆ ವರ್ಗ ಮಾಡುವುದರಿಂದ ಹುಡುಗರಿಗೆ ತೊಂದರೆಯಾಗುತ್ತದೆ, ಆ ರೀತಿ ವರ್ಗಮಾಡಲಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾಲ್ಲೂಕು ಬೋರ್ಡುಗಳಿಂದ ಶಾಲೆಗಳನ್ನು ತೆಗೆದುಕೊಂಡು ಸುಮಾರು 10 ವರ್ಷಗಳ ಮೇಲಾಗಿದೆ. ಹೀಗಿರುವಾಗ ಸರಕಾರ ಏಕೆ ಇದನ್ನು ಇನ್ನೂ ಸರಿಪಡಿಸಲು ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ ? ಇಂತಹ ಶಾಲೆಗಳನ್ನು ಏಕೆ ಮುಚ್ಚಬಾರದು?

ಶ್ರೀ ಎ. ಆರ್. ಬದರೀನಾರಾಯಣ್.—ತಮ್ಮ ಸಲಹೆಯನ್ನು ಪೂರ್ಣವಾಗಿ ಒಪ್ಪುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಇಲ್ಲಿರುವ ಶಾಲೆಯಲ್ಲಿ ಎಷ್ಟು ಸೆಕ್ಷನ್‌ಗಳಿವೆ. ಮತ್ತು ಪ್ರತಿಯೊಂದು ಸೆಕ್ಷನ್‌ನಲ್ಲೂ ಇರುವ ಹುಡುಗರ ಸಂಖ್ಯೆ ಏನು ?

ಶ್ರೀ ಎ. ಆರ್. ಬದರೀನಾರಾಯಣ್.—ಇದರ ವಿವರಗಳಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಖಾನಗಿಯವರು ಪ್ರಚಾರ ಮಾಡಬೇಕೆಂದರೆ ಯಾವ ರೀತಿ ಪ್ರಚಾರ ಮಾಡಬೇಕೆಂದು ಸರಕಾರವು ನೀತಿ ಇದೆ ಎಂಬುದನ್ನು ತಿಳಿಸಲಾಗುತ್ತದೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಆ ಊರಿನಲ್ಲಿರುವ ಖಾಸಗಿ ಜನರ ಮಕ್ಕಳನ್ನು ಶಾಲೆಗೆ ಕಳುಹಿಸಿ ಹೆಚ್ಚು ಆಸಕ್ತಿ ತೋರಿಸಿದರೆ ಶಾಲೆಗಳು ಚೆನ್ನಾಗಿ ಆಗುತ್ತದೆ ಎಂದು ನನ್ನ ಭಾವನೆ.

Sri M. H. JAYAPRAKASH NARAYANA.—According to G.O.No. ED330 dated 14-4-1967 all fees recognised by the Government should not be collected from the scheduled castes. Such being the case, how is it a fees of 50 paise is collected from Scheduled Castes?

Sri A. R. BADARINARAYANA.—I want notice.

ಶ್ರೀ ಟಿ. ಎಂ. ಮಂಜುನಾಥ್.—ಆರು ಜನ ಟೀಚರುಗಳಿದ್ದು ಕೇವಲ 53 ಹುಡುಗರು ಮಾತ್ರ ಇಲ್ಲಿನ ಹೈಸ್ಕೂಲಿನಲ್ಲಿರುವುದು ನೋಡಿದರೆ ಇದರಲ್ಲಿ ಅಧಿಕಾರಿಗಳ ನಿರಾಸಕ್ತಿಯು ಮೆನೋ ಭಾವವಿರುವುದು ಕಾರಣವಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಇದೂ ಒಂದು ಕಾರಣವಿರಬಹುದು.

ಶ್ರೀ ಬಿ. ಇ. ರಾಮಯ್ಯ.—ವಿದ್ಯಾರ್ಥಿಗಳು ಇರುವ ಸಂಖ್ಯೆಗೆ ತಕ್ಕಂತೆ ಉಪಾಧ್ಯಾಯರುಗಳ ಸಂಖ್ಯೆಯೂ ಇರಬೇಕು. ಹಾಗಿಲ್ಲದ ಪಕ್ಷದಲ್ಲಿ ಇಲ್ಲಿ ಹೆಚ್ಚು ಜನ ಉಪಾಧ್ಯಾಯರುಗಳೇಕಿರಬೇಕು ? ಇವರನ್ನು ಬೇರೆ ಕಡೆಗೆ ವರ್ಗ ಮಾಡುವುದು ಸರಿಯಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಉಪಾಧ್ಯಾಯರುಗಳು ಇರುವುದಕ್ಕೆ ಅಲ್ಲಿ ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇಲ್ಲಿ ಇರುವ ಉಪಾಧ್ಯಾಯರುಗಳಿಗೆ ಮನೆ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲಿರುವ ಸ್ಥಳೀಯ ಜನರು ಸ್ವಲ್ಪ ಆಸಕ್ತಿ ವಹಿಸಿ ಅಲ್ಲಿರುವ ಶಾಲೆಯನ್ನು ಉಳಿಸಿಕೊಳ್ಳಲು ಮತ್ತು ಹೆಚ್ಚು ಹುಡುಗರು ಅಲ್ಲಿ ವಿದ್ಯಾಭ್ಯಾಸ ಪಡೆಯಲು ಸಹಾಯ ಮಾಡಿದರೆ ಇವೆಲ್ಲ ಸರಿಹೋಗಬಹುದು, ತಾವು ಅಲ್ಲಿನ ಲೋಕಲ್ ಏರಿಯಾದಿಂದ ಬರುವ ವರು ಅಲ್ಲಿನ ಉಪಾಧ್ಯಾಯರುಗಳಿಗೆ ಸರಿಯಾದ ಸೌಕರ್ಯವನ್ನು ಮಾಡಿಸಿಕೊಡುವುದಾಗಿದ್ದರೆ ನಾವು ಇದನ್ನು ಸರಿಪಡಿಸಬಹುದು.

ಶ್ರೀ ಟಿ. ಎಂ. ಮಂಜುನಾಥ್.—ಸರಕಾರದ ನೀತಿಯ ಪ್ರಕಾರ ಒಂದೊಂದು ಹೈಸ್ಕೂಲಿನಲ್ಲಿ ಇಂತಿಷ್ಟು ಸೆಕ್ಷನ್‌ಗಳು ಇದ್ದರೆ ಆಗ ಅಲ್ಲಿ ಹೈಸ್ಕೂಲು ತೆಗೆಯಬಹುದು ಎಂದು ಇದೆ. ಈ ನೀತಿಯನ್ನು ಇಲ್ಲಿ ಅನುಸರಿಸಿದ್ದಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಇದು ಮೊದಲಿದ್ದ ಸಂಸ್ಥೆಗಳಿಂದ ನಡೆದುಕೊಂಡು ಬಂದಿರುವುದು, ಮುಂದೆ ಇದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ನಾವು ಈಗ ನಿರ್ಣಯ ಮಾಡಬೇಕಾಗಿದೆ.

ಶ್ರೀ ಪಿ. ಎಂ. ಬಂಗಿ.—ಈ ಶಾಲೆಯಲ್ಲಿ ಕಳೆದ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಎಷ್ಟು ಜನ ಕುಳಿತಿದ್ದರು ಮತ್ತು ಎಷ್ಟು ಜನ ಪಾಸಾದರು ?

ಶ್ರೀ ಎ. ಆರ್. ಬದರೀನಾರಾಯಣ್.—ಇದರಲ್ಲಿ ಇದು ಬರುವುದಿಲ್ಲ.

ಶ್ರೀ ಬಿ.ಇ. ರಾಮಯ್ಯ—ಇಲ್ಲಿ ಸ್ಥಳದವರು ಆಸಕ್ತಿ ವಹಿಸಬೇಕು ಎಂದು ಹೇಳಿದರು, ಇಲ್ಲಿರುವ ಇನ್‌ಸ್ಪೆಕ್ಟರುಗಳು ಸರಿಯಾಗಿ ಹೋಗಿ ತನಿಖೆ ಮಾಡುತ್ತಿಲ್ಲ ಎಂದು ನಾವು ಇಲ್ಲಿ ಸರಕಾರದ ಗಮನಕ್ಕೆ ತಂದರೆ ತಾವು ತಕ್ಕ ಕ್ರಮ ತೆಗೆದುಕೊಂಡು ಸರಿ ಮಾಡಲಾಗವುದಿಲ್ಲವೇ ! ಇದಕ್ಕೆ ಇನ್ನು ಯಾವ ರೀತಿ ಸರಕಾರದ ಗಮನಕ್ಕೆ ತರಬೇಕು ?

ಶ್ರೀ ಎ. ಆರ್. ಬದರೀನಾರಾಯಣ್.—ಈಗ ತಾವು ತಿಳಿಸಿದ್ದೀರಿ. ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಇಲ್ಲಿರುವ ಟೀಚರುಗಳಿಗೆ ವಸತಿ ಸೌಕರ್ಯ ಹಾಗೂ ಇವರಿಗೆ ಬೇಕಾಗುವ ಇತರ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ ಮತ್ತು ಆ ಸ್ಥಳದವರು ಈ ಶಾಲೆಯನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡಬೇಕು.

ಶ್ರೀ ಡಿ. ನಾರಾಯಣದಾಸ್.—ನಾವೇನೋ ಸ್ಥಳದವರು ಇಲ್ಲಿಗೆ ಬರುವ ಟೀಚರುಗಳಿಗೆ ಎಲ್ಲ ಸಹಾಯವನ್ನೂ ಒದಗಿಸಿಕೊಡಲು ತಯಾರಿದ್ದೇವೆ. ಆದರೆ ನಿಮ್ಮ ಡಿಪಾರ್ಟ್‌ಮೆಂಟಿನವರು ಸಹಾಯಮಾಡಿ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎ. ಆರ್. ಬದರೀನಾರಾಯಣ್.—ಇದನ್ನು ಹೇಗೆ ಮಾಡಬಹುದೋ ಹಾಗೆ ಪರಿಶೀಲಿಸಿ ಮಾಡುತ್ತೇನೆ.

SHORT NOTICE QUESTION AND ANSWER

Resignation of Councillors of Belgaum Municipality

26. Sri B. B. SAYANAK (Belgaum).—

Will the Minister for Municipal Administration be pleased to state:—

(*a*) whether it is a fact that five Municipal Councillors have resigned in protest against the policy of the Govenment in extending the term of the Belgaum City Municipality on 12-3-1973;

(*b*) if so, whether the resignations have been accepted ;

(*c*) if so, whether the Government proposes to hold bye-election for these five seats;